

ಮರಳುತುಂಬಿದ ಗದ್ದೆಗಳು, ಕೃಷಿ ಮಾಡಲು ಸಾಧ್ಯವಿಲ್ಲದೆ ಹಡಿಲು ಬಿದ್ದಿರುವುದು ಚಿತ್ರ: ಪುರೂಜಿತ್ ಭಿಡೆ

ಭೂಕುಸಿತ ಆಗಬಹುದು ಎಂದೂ ವರದಿ ಗುರುತಿಸಿದೆ. ಆ ಪ್ರದೇಶಗಳೆಂದರೆ:

- ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ, ವಿರಾಜಪೇಟೆ.
- ಹಾಸನದ ಸಕಲೇಶಪುರ.
- ಚಿಕ್ಕಮಗಳೂರಿನ ಕೊಪ್ಪ, ಮೂಡಿಗೆರೆ, ಶೃಂಗೇರಿ ಮತ್ತು ಚಿಕ್ಕಮಗಳೂರು.
- ಉತ್ತರ ಕನ್ನಡದ ಅಂಕೋಲಾ, ಕುಮಟಾ, ಕಾರವಾರ, ಹೊನ್ನಾವರ, ಶಿರಸಿ, ಸಿದ್ಧಾಪುರ, ಜೋಯಿಡಾ ಮತ್ತು ಯಲ್ಲಾಪುರ.
- ಉಡುಪಿಯ ಕಾರ್ಕಳ.
- ದಕ್ಷಿಣ ಕನ್ನಡದ ಬೆಳ್ತಂಗಡಿ, ಬಂಟ್ವಾಳ, ಪುತ್ತೂರು, ಸುಳ್ಯ ಮತ್ತು ಮಂಗಳೂರು.

ಅನಂತ ಹೆಗಡೆ ಅಶೀಸರ ಸಮಿತಿ ಕೂಡ, ಮನುಷ್ಯ ಪ್ರೇರಿತ ವಿಪರೀತ ಚಟುವಟಿಕೆಗಳೇ ಭೂಕುಸಿತಕ್ಕೆ ಕಾರಣವೆಂದು ಹೇಳಿದೆ.

ಬೆಟ್ಟಗಳ ಮೇಲ್ಮೈ ಇಳಿಜಾರು ಪ್ರದೇಶದಲ್ಲಿ ಸಹಜವಾಗಿ ಬೆಳೆದ ಗಿಡ, ಮರ, ಹುಲ್ಲುಗಳನ್ನು ಕಿತ್ತು ಅಲ್ಲಿ ವಾಣಿಜ್ಯ ಬೆಳೆಗಳನ್ನು ಬೆಳೆದಾಗ ಹೊರಮೈ ಮಣ್ಣನ್ನು ಭದ್ರವಾಗಿ ಹಿಡಿದಿಟ್ಟುಕೊಳ್ಳುವುದು ಸಾಧ್ಯವಾಗುವುದಿಲ್ಲ. ಅವೈಜ್ಞಾನಿಕವಾಗಿ ಇಳಿಜಾರು ಪ್ರದೇಶವನ್ನು ಅಗೆದು ಹಾಕಿದಾಗ, ಪ್ರವಾಸೋದ್ಯಮ ದೃಷ್ಟಿಯಿಂದ ರೂಪುಗೊಂಡಿರುವ ವಸತಿ ನಿಲಯಗಳ ಬಳಕೆಗಾಗಿ ಸಹಜ ಹರಿವಿನ ನೀರಿನ ದಿಕ್ಕನ್ನು ಬದಲಿಸಿದಾಗ, ಮಣ್ಣಿನ ಸಮತೋಲನ ತಪ್ಪಿಹೋಗುತ್ತದೆ.

ವರದಿಯ ಪ್ರಕಾರ, ಭೂಕುಸಿತಕ್ಕೆ ಎರಡು ಬಗೆಯ ಪ್ರಚೋದನೆಗಳು ಕಾರಣ. ಮೊದಲನೆಯದು: ಕರ್ನಾಟಕದಲ್ಲಿ ವಾರ್ಷಿಕ ಸರಾಸರಿ ಮಳೆ ಏಕಪ್ರಕಾರವಿದ್ದರೂ, ಕೆಲವು ಗಂಟೆಗಳಲ್ಲಿ ಅತಿಯಾಗಿ ಮಳೆ ಸುರಿಯುತ್ತಿರುವುದು ತಜ್ಞರ ಗಮನಕ್ಕೆ ಬಂದಿದೆ. ಎರಡನೆಯದು, ಸಡಿಲವಾದ ಮೇಲ್ಮಣ್ಣಿನ ಹೊದಿಕೆ ಇರುವ ಬೆಟ್ಟಗಳ ಮೇಲೆ ಇರುವ ಹಸಿರನ್ನು ನಾಶಮಾಡುವ ಚಟುವಟಿಕೆಗಳು. ಇವುಗಳನ್ನೆಲ್ಲ ಗಮನಿಸಿದ ಸಮಿತಿಯು ಪಶ್ಚಿಮ ಘಟ್ಟದಲ್ಲಿ ಸಮಗ್ರ ಭೂಕುಸಿತ ನಿಯಂತ್ರಣ ಮಾರ್ಗೋಪಾಯಗಳ ಕಾರ್ಯಯೋಜನೆಯೊಂದನ್ನು ರೂಪಿಸುವ ಅಗತ್ಯವಿದೆ ಎಂದು ಹೇಳಿದೆ. ಈ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಕ್ರಮಗಳ ವಿವರವನ್ನು ಸರ್ಕಾರಕ್ಕೆ ಸಲ್ಲಿಸಿದೆ.

*

ಪರಿಸರ ಸಂರಕ್ಷಣೆಗೆ ಸಂಬಂಧಿಸಿದ ವರದಿಗಳನ್ನು ಸ್ವೀಕರಿಸುವ ಸರ್ಕಾರ, ಅವುಗಳ ಆಧಾರದಲ್ಲಿ ಸಂರಕ್ಷಣೆಯ ನಿಯಮಗಳನ್ನು ರೂಪಿಸುವುದು ಬಹಳ ನಿಧಾನ. ಅಥವಾ ಸಂರಕ್ಷಣಾ ವ್ಯವಸ್ಥೆಯನ್ನು ಕಲ್ಪಿಸುವ ಗೋಜಿಗೇ ಹೋಗುವುದಿಲ್ಲ. ಈ ಹಿಂದೆ ಪರಿಸರ ವಿಜ್ಞಾನಿ ಡಾ. ಎಂ. ಮಾಧವ ಗಾಡ್ಗೀಳ್ ಮತ್ತು ಡಾ. ಕಸ್ತೂರಿ ರಂಗನ್ ಅವರು ಸಲ್ಲಿಸಿದ ವರದಿಗಳ ನಂತರ ಸರ್ಕಾರಗಳು ಯಾವೆಲ್ಲ ಕ್ರಮಗಳನ್ನುಕೈಗೊಂಡಿವೆ ಎಂಬುದನ್ನು ಗಮನಿಸಿದರೆ ನಿರಾಶೆಯಾಗುತ್ತದೆ.

ಭೂಕುಸಿತವು ನಾಗರಿಕರ ದೈನಂದಿನ ಜೀವನದ ಮೇಲೆ ನೇರ ಪರಿಣಾಮ ಬೀರುವಂತಹುದು. ಹಣವುಳ್ಳವರು ಬೃಹತ್ ಪ್ರಮಾಣದ ಉದ್ಯಮ, ಕಾಮಗಾರಿಗಳು, ಯೋಜನೆಗಳ ಬೆಂಬತ್ತಿ ಸಾಗುತ್ತಿದ್ದರೆ, ಜನಸಾಮಾನ್ಯರು ಪರಿಸರ ಅವಘಡಗಳ ಪರಿಣಾಮವನ್ನು ಎದುರಿಸುತ್ತಾ, ದುಡಿದು ಗಳಿಸಿದ ಆದಾಯವನ್ನೆಲ್ಲ ಕಳೆದುಕೊಂಡು ಬೀದಿಗೆ ಬೀಳಬೇಕಾದ ಪರಿಸ್ಥಿತಿ ಸೃಷ್ಟಿಯಾಗುತ್ತಿದೆ. ಹಿಜ್ಜನಹಳ್ಳಿಯ ಹರೀಶ್ ಆಗಲೀ, ಮಕ್ಕಿಯ ಆನಂದ ಗೌಡ ಆಗಲೀ, ಮಧುಗುಂಡಿಯಲ್ಲಿ ಮನೆಮಠಗಳನ್ನು ಕಳೆದುಕೊಂಡ ನಿವಾಸಿಗಳಾಗಲೀ ಇಂದಿಗೂ ಪರಿಹಾರಕ್ಕಾಗಿ ಅಲೆದಾಡುತ್ತಿದ್ದಾರೆ.

ಭೂಕುಸಿತದ ಆತಂಕ ಎದುರಿಸುತ್ತಿರುವ ಪ್ರದೇಶಗಳಲ್ಲಿ ವಾಸಿಸುತ್ತಿರುವವರು ತಮ್ಮ ಮಕ್ಕಳನ್ನು ಬಂಧುಗಳ ಮನೆಯಲ್ಲೋ, ದೂರದ ಹಾಸ್ಟೆಲ್‌ನಲ್ಲೋ ಇರುವಂತೆ ಹೇಳಿ ಅವರಿಗೆ ಶಿಕ್ಷಣ ಒದಗಿಸಬೇಕಾಗಿದೆ. ನಡೆದುಕೊಂಡು ಹೋಗುವುದಕ್ಕೆ ಸುರಕ್ಷಿತವಲ್ಲದ ದಾರಿಗಳು, ಕಾಲುದಾರಿಯಲ್ಲಿ ದಾಟಿಕೊಂಡು ಹೋಗಬಹುದಾದ ತೋಡುಗಳು ಬಾಯ್ಬಿಟ್ಟು ದೊಡ್ಡ ಕಣಿವೆಗಳಾಗಿವೆ. ಜಡಿಮಳೆಯಲ್ಲಿ ಯಾವ ಬೆಟ್ಟ ಕುಸಿದು ಮಕ್ಕಳು ಅಪಾಯಕ್ಕೀಡಾಗುವರೋ ಎಂಬ ಆತಂಕ ತಪ್ಪಲು ಪ್ರದೇಶದಲ್ಲಿ ವಾಸಿಸುವವರಲ್ಲಿ ಮನೆ ಮಾಡಿದೆ.

ಪ್ರಾಕೃತಿಕ ದುರಂತ ನಡೆದಾಗ, ಆ ದುರಂತದಿಂದ ಸಂಭವಿಸಿದ ಅನಾಹುತವನ್ನು ಸರಿಪಡಿಸುವ ಹಾಗೂ ಸಂತ್ರಸ್ತರಿಗೆ ಪರಿಹಾರ ಕಲ್ಪಿಸುವುದು ಮಾತ್ರ ತನ್ನ ಹೊಣೆಗಾರಿಕೆ ಎಂದು ಸರ್ಕಾರ ಭಾವಿಸಿರುವಂತಿದೆ. ಜನಪರ ಸರ್ಕಾರದ ನಿಜವಾದ ಜವಾಬ್ದಾರಿ ಇರುವುದು, ದುರಂತದ ಮೂಲಗಳನ್ನು ಕಂಡುಕೊಂಡು, ಅಂತಹ ಅವಘಡಗಳು ಮತ್ತೆ ನಡೆಯದಂತೆ ಎಚ್ಚರವಹಿಸುವುದರಲ್ಲಿ ಹಾಗೂ ಆ ನಿಟ್ಟಿನಲ್ಲಿ ಜನಜಾಗೃತಿ ಮೂಡಿಸುವುದರಲ್ಲಿ. ಈಗ ಆಗಬೇಕಿರುವುದು ಗುಡ್ಡ ಕುಸಿದಾಗ ಮಣ್ಣು ಎತ್ತುವ ಕೆಲಸವಲ್ಲ; ಗುಡ್ಡಗಳು ಕುಸಿಯದಂತೆ ಬದುಕು–ವ್ಯವಸ್ಥೆಯನ್ನು ರೂಪಿಸುವ ಕೆಲಸ.

ಪ್ರತಿಕ್ರಿಯಿಸಿ: feedback@sudha.co.in